

# ಗುಬ್ಬಿಗೊಂದು ದಿನ..

ಮೊಹಮ್ಮದ್ ದಿಲಾವರ್ ಅವರ 'ನೇಚರ್ ಫಾರ್ ಎವರ್' ಸಂಸ್ಥೆ ಆರಂಭಿಸಿದ 'ವಿಶ್ವ ಗುಬ್ಬಚ್ಚಿ ದಿನ' ಮಾರ್ಚ್ 20ರಂದು ಎಲ್ಲೆಡೆ ಆಚರಿಸಲಾಗುತ್ತಿದೆ...

■ ಚಿತ್ರ - ಬರಹ: **ಕಿರಣ್ ವಟಿ, ಮಂಗಳೂರು**



ಹುಬ್ಬಳ್ಳಿಗೆ ಒಮ್ಮೆ ಕಾರ್ಯ ನಿಮಿತ್ತ ಹೋದಾಗ ಹೋಟೆಲ್ ಆವರಣದಲ್ಲಿರುವ ಎರಡು ಬಿದುರು ಮೆಳೆಯಲ್ಲಿ ನೂರಾರು ಗುಬ್ಬಿಗಳು ವಾಸವಿದ್ದದ್ದು ನೋಡಿ ಅಚ್ಚರಿಯಾಯಿತು. ಒಂದೆರಡು ಗುಬ್ಬಿಗಳನ್ನು ಕಾಣುವುದೇ ದುಸ್ತರವಾಗಿರುವಾಗ ಹೀಗೆ ನೂರಾರು ಸಂಖ್ಯೆಯ ಗುಬ್ಬಿಗಳನ್ನು ನೋಡುವುದು ಒಂದು ಸಂಭ್ರಮದ ವಿಷಯವಾಗಿತ್ತು. ವಾಸ್ತವಾಂಶ ಏನೆಂದರೆ ಆ ಹೋಟೆಲಿನವರೇ ಆ ಎಲ್ಲಾ ಗುಬ್ಬಿಗಳಿಗೆ ಆಶ್ರಯ ನೀಡಿ ಅವಕ್ಕೆ ಬೇಕಾದ ಆಹಾರ ಒದಗಿಸಿ ಸಂತತಿಯನ್ನು ಬೆಳೆಸುತ್ತಿದ್ದಾರೆ. ಕೆಲವು ವರ್ಷಗಳ ಹಿಂದೆ ಏಳು ಗುಬ್ಬಿಗಳಿಂದ ಆರಂಭವಾದ ಅವರ ಗುಬ್ಬಿಪ್ರೇಮ ಇಂದು ಈ ಮಟ್ಟಕ್ಕೆ ಬಂದು ನಿಂತಿದೆ. ಗುಬ್ಬಚ್ಚಿ ಸಂರಕ್ಷಣೆಗಾಗಿ ಯಾವುದಾದರೂ ಪ್ರಶಸ್ತಿ ಇದ್ದಲ್ಲಿ ಅದು ಇವರಿಗೆ ಸಲ್ಲಬೇಕಾಗುತ್ತದೆ.

ಆಧುನಿಕ ಬದುಕಿನ ವಿಧಾನದಿಂದ, ಅಗತ್ಯವೆನ್ನಿಸುವ ವಸ್ತುಗಳ ತಯಾರಿಕೆಯಿಂದಾಗಿ ಪರಿಸರ ನಾಶ ಮತ್ತು ಪರಿಸರ ಮಾಲಿನ್ಯದ ಕಾರಣದಿಂದ ಅದೆಷ್ಟೋ ಜೀವರಾಶಿಗಳು ಕಣ್ಮರೆಯಾಗುತ್ತಿವೆ. ಮತ್ತಷ್ಟು ವಿನಾಶದ ಅಂಚಿಗೆ ಬಂದು ನಿಂತಿವೆ.

**(18ನೇ ಪುಟ ನೋಡಿ)**